# ವಚನಗಳಲ್ಲಿ ಭಕ್ತಿಯ ಸ್ವರೂಪ

**ಶ್ರೀಶೈಲ***

**DOI: https://doi.org/10.5281/zenodo.19501628**

**ABSTRACT**

ವಚನ ಸಾಹಿತ್ಯವು ಕನ್ನಡ ಭಕ್ತಿ ಚಳವಳಿಯ ಅಮೂಲ್ಯ ಭಾಗವಾಗಿದೆ. 12ನೇ ಶತಮಾನದಲ್ಲಿ ಉದ್ಭವಿಸಿದ ಈ ಸಾಹಿತ್ಯವು ಸಮಾಜದಲ್ಲಿ ಸಮಾನತೆ, ನೈತಿಕತೆ ಮತ್ತು ಆಧ್ಯಾತ್ಮಿಕತೆ ಕುರಿತು ಮಹತ್ವದ ಸಂದೇಶಗಳನ್ನು ಹರಡಿತು. ಬಸವಣ್ಣ, ಅಕ್ಕ ಮಹಾದೇವಿ, ಅಲ್ಲಮ ಪ್ರಭು, ಏಲೇಶ್ವರದ ಕೇತಯ್ಯ ಮುಂತಾದ ಶರಣರು ತಮ್ಮ ವಚನಗಳ ಮೂಲಕ ಭಕ್ತಿಯ ನಿಜಸ್ವರೂಪವನ್ನು ಜನರಿಗೆ ಸರಳವಾಗಿ ತಿಳಿಸಿದರು.

ವಚನಗಳಲ್ಲಿ ಭಕ್ತಿ ಎಂದರೆ ಕೇವಲ ಪೂಜೆ ಅಥವಾ ಆಚರಣೆಗಳಲ್ಲ; ಅದು ಮನಸ್ಸಿನ ಶುದ್ಧತೆ, ದೇವರ ಮೇಲೆ ನಿಷ್ಠೆ ಮತ್ತು ಸತ್ಯ ಜೀವನ ನಡೆಸುವ ದೃಷ್ಟಿಕೋನವಾಗಿದೆ. ಇವುಗಳಲ್ಲಿ ವ್ಯಕ್ತವಾಗುವ ಭಕ್ತಿ ವೈಯಕ್ತಿಕ ಅನುಭವದ ಆಧಾರಿತವಾಗಿದ್ದು, ಜಾತಿ, ಲಿಂಗ, ಧರ್ಮ ಎಂಬ ಭೇದಗಳನ್ನು ತಳ್ಳಿಹಾಕುತ್ತದೆ. ಶರಣರು ದೇವರನ್ನು ಒಳಮನಸ್ಸಿನಲ್ಲಿ ಅನುಭವಿಸುವುದೇ ಸತ್ಯಭಕ್ತಿ ಎಂದು ಬೋಧಿಸಿದರು.

ಆದ್ದರಿಂದ, ವಚನಗಳಲ್ಲಿ ಭಕ್ತಿಯ ಸ್ವರೂಪವು ಸರಳತೆ, ಸಮಾನತೆ ಮತ್ತು ಆಂತರಿಕ ಶುದ್ಧತೆಯ ಸಂಕೇತವಾಗಿದೆ. ಈ ಭಕ್ತಿ ಮಾನವನನ್ನು ಉನ್ನತ ಜೀವನದತ್ತ ಕೊಂಡೊಯ್ಯುವ ದಾರಿಯಾಗಿ ಕಾಣುತ್ತದೆ.

**KEYWORDS:** ನೈಜಭಕ್ತಿ, ಡಾಂಭಿಕಭಕ್ತಿ, ಇಷ್ಟಲಿಂಗ, ಆತ್ಮಶುದ್ಧಿ, ನಿಷ್ಠೆ, ಸತ್ಯ, ಅರಿವು, ಮನ ಶುದ್ಧಿ, ಭಾವ ಶುದ್ಧಿ.

* **ಶ್ರೀಶೈಲ,** ಪ್ರಾಂಶುಪಾಲ ಮತ್ತು ಸಹಾಯಕ ಪ್ರಾಧ್ಯಾಪಕ, ಶ್ರೀ.ಜಿ.ಆರ್.ಜಿ ಕಲಾ, ಶ್ರೀ.ವೈ.ಎ.ಪಿ. ವಾಣಿಜ್ಯ ಹಾಗೂ ಶ್ರೀ.ಎಂ.ಪಿ.ಡಿ. ವಿಜ್ಞಾನ ಪದವಿ ಮಹಾವಿದ್ಯಾಲಯ, ಇಂಡಿ.

ಕನ್ನಡ ಸಾಹಿತ್ಯದಲ್ಲಿ ವಚನಗಳು ವಿಶಿಷ್ಟ ಸ್ಥಾನವನ್ನು ಪಡೆದಿವೆ. ಇವು ಕೇವಲ ಸಾಹಿತ್ಯಕ ಕೃತಿಗಳಷ್ಟೇ ಅಲ್ಲ, ಜೀವನದ ಮೌಲ್ಯಗಳನ್ನು ಬೋಧಿಸುವ ಆಧ್ಯಾತ್ಮಿಕ ಮಾರ್ಗದರ್ಶಕಗಳಾಗಿವೆ. 12ನೇ ಶತಮಾನದಲ್ಲಿ ಉದಯಿಸಿದ ವಚನ ಚಳವಳಿ ಸಮಾಜದ ಅನೇಕ ಅಸಮಾನತೆಗಳನ್ನು ಪ್ರಶ್ನಿಸಿ, ಮಾನವೀಯತೆ ಮತ್ತು ಸಮಾನತೆಯ ತತ್ವಗಳನ್ನು ಪ್ರತಿಪಾದಿಸಿತು. ಬಸವಣ್ಣ ಅವರ ನೇತೃತ್ವದಲ್ಲಿ ನಡೆದ ಈ ಚಳವಳಿಯಲ್ಲಿ ಅನೇಕ ಶರಣರು ಭಾಗವಹಿಸಿ, ತಮ್ಮ ಅನುಭವಗಳನ್ನು ಸರಳ ಮತ್ತು ಸ್ಪಷ್ಟವಾದ ಭಾಷೆಯಲ್ಲಿ ವಚನಗಳ ರೂಪದಲ್ಲಿ ವ್ಯಕ್ತಪಡಿಸಿದರು.

ವಚನಗಳಲ್ಲಿ ವ್ಯಕ್ತವಾಗುವ ಭಕ್ತಿ ಸಂಪ್ರದಾಯಬದ್ಧ ಆಚರಣೆಗಳಿಗೆ ಸೀಮಿತವಾಗಿರದೆ, ಆತ್ಮಸಾಕ್ಷಾತ್ಕಾರ ಮತ್ತು ಒಳಮನಸ್ಸಿನ ಶುದ್ಧತೆಗೆ ಮಹತ್ವ ನೀಡುತ್ತದೆ. ದೇವರೊಂದಿಗೆ ನೇರ ಸಂಬಂಧ ಹೊಂದುವ ಭಾವನೆ, ಸತ್ಯನಿಷ್ಠ ಜೀವನ ಮತ್ತು ಸೇವಾಭಾವನೆ ಈ ಭಕ್ತಿಯ ಮೂಲ ಅಂಶಗಳಾಗಿವೆ.

ಈ ಹಿನ್ನೆಲೆಯಲ್ಲಿ "ವಚನಗಳಲ್ಲಿ ಭಕ್ತಿಯ ಸ್ವರೂಪ" ಎಂಬ ವಿಷಯವು ಭಕ್ತಿಯ ಆಳವಾದ ಅರ್ಥವನ್ನು ಅರಿಯಲು ಸಹಾಯಕವಾಗಿದ್ದು, ಮಾನವನ ಆತ್ಮೋನ್ನತಿಗೆ ದಾರಿ ತೋರಿಸುವ ಮಹತ್ವದ ವಿಷಯವಾಗಿದೆ.

ಭಕ್ತಿ ಎಂದರೆ ಸ್ವಾರ್ಥರಹಿತ ಪ್ರೀತಿ, ಸಮಾನತೆ ಮತ್ತು ಸತ್ಯನಿಷ್ಠೆಯ ಮೂಲಕ ವ್ಯಕ್ತವಾಗುವ ಜೀವನ ಮೌಲ್ಯವಾಗಿದೆ. ಈ ಹಿನ್ನೆಲೆಯಲ್ಲಿ 12 ನೇ ಶತಮಾನದ ವಚನಕಾರರ ವಚನಗಳಲ್ಲಿ ಭಕ್ತಿಯ ಸ್ವರೂಪವನ್ನು ಆಳವಾಗಿ ಅರ್ಥಮಾಡಿಕೊಳ್ಳುವುದು ಅಗತ್ಯವಾಗಿದೆ.

ಬಂಡಿ ತುಂಬ ಪತ್ರೆಯ ತಂದು, ಕಂಡಕಂಡಲ್ಲಿ ಮಜ್ಜನಕ್ಕೆರೆವಿರಿ, ತಾಪತ್ರಯವ ಕಳೆದು ಪೂಜಿಸಿ, ತಾಪತ್ರಯವ ಲಿಂಗನೊಲ್ಲ. ಕೂಡಲಸಂಗಮದೇವ ಬರಿಯುದಕದಲ್ಲಿ ನೆನೆವನೆ?

ಈ ವಚನದಲ್ಲಿ ಬಸವಣ್ಣನವರು ಹೊರಗಣ ಆಚರಣೆಗಳ ಮೇಲೆ ನಿಂತ ಭಕ್ತಿಯನ್ನು ಗಂಭೀರವಾಗಿ ಪ್ರಶ್ನಿಸುತ್ತಾನೆ. "ಬಂಡಿ ತುಂಬ ಪತ್ರೆ ತಂದು" ಎನ್ನುವುದರಿಂದ ಭಕ್ತರು ಅಪಾರ ಪ್ರಮಾಣದಲ್ಲಿ ಪೂಜಾಸಾಮಗ್ರಿಗಳನ್ನು ಸಂಗ್ರಹಿಸುವುದನ್ನು ಸೂಚಿಸುತ್ತಾನೆ. ದೇವರ ಆರಾಧನೆಗೆ ಬೇಕಾದ ಎಲೆ–ಹೂವುಗಳನ್ನು ರಾಶಿಯಾಗಿ ತಂದು, "ಕಂಡಕಂಡಲ್ಲಿ ಮಜ್ಜನಕ್ಕೆರೆವಿರಿ" ಎಂದರೆ ಎಲ್ಲೆಡೆ ಸ್ನಾನ, ಅಭಿಷೇಕ, ಶುದ್ಧಿ ಎಂಬ ಹೆಸರಿನಲ್ಲಿ ಹೊರಗಿನ ಕ್ರಿಯೆಗಳನ್ನು ಹೆಚ್ಚಾಗಿ ಮಾಡುವುದನ್ನು ತೋರ್ಪಡಿಸುತ್ತದೆ. ಆದರೆ ಬಸವಣ್ಣನ ಮುಖ್ಯ ಪ್ರಶ್ನೆ ಹೊರಗಿನ ಪ್ರಮಾಣದ ಬಗ್ಗೆ ಅಲ್ಲ–ಅದರ ಒಳಾರ್ಥದ ಬಗ್ಗೆ. "ತಾಪತ್ರಯವ ಕಳೆದು ಪೂಜಿಸಿ" ಎಂದು ಹೇಳುವಾಗ, ಮಾನವನೊಳಗಿನ ಮೂರು ತಾಪಗಳು–ಆಧ್ಯಾತ್ಮಿಕ, ಮಾನಸಿಕ, ದೈಹಿಕ ಕಳವಳಗಳು–ಇವುಗಳನ್ನು ನಿವಾರಿಸದೇ ಇರುವ ಪೂಜೆ ಅರ್ಥಹೀನವೆಂದು ಸೂಚಿಸುತ್ತಾನೆ. "ತಾಪತ್ರಯವ ಲಿಂಗನೊಲ್ಲ" ಎಂಬ ಸಾಲು ಮೂಲಕ, ಲಿಂಗಸ್ವರೂಪವಾದ ದೇವರು ಈ ಒಳಗಿನ ಅಶುದ್ಧಿ, ಅಶಾಂತಿಯನ್ನು ಸ್ವೀಕರಿಸುವುದಿಲ್ಲವೆಂದು ತೀವ್ರವಾಗಿ ಹೇಳುತ್ತಾನೆ.

ಕೊನೆಯ ಸಾಲು "ಬರಿಯುದಕದಲ್ಲಿ ನೆನೆವನೆ?" ಎಂಬುದು ತೀಕ್ಷ್ಣ ವಿಮರ್ಶೆ. ಕೇವಲ ನೀರಿನಲ್ಲಿ ನೆನೆಸುವುದರಿಂದ, ಅಂದರೆ ಅಭಿಷೇಕಗಳಿಂದ ಮಾತ್ರ ದೇವರನ್ನು ತೃಪ್ತಿಪಡಿಸಬಹುದು ಎಂದು ಭಾವಿಸುವುದು ತಪ್ಪು ಎಂಬ ಸಂದೇಶ ಇಲ್ಲಿ ಸ್ಪಷ್ಟವಾಗುತ್ತದೆ. ದೇವರು ನೀರಿನ ಅಭಿಷೇಕದಲ್ಲಿಲ್ಲ, ಆತ ಮನಸ್ಸಿನ ಶುದ್ಧಿಯಲ್ಲಿ ನೆಲೆಸಿದ್ದಾನೆ ಎಂಬ ಅರ್ಥವನ್ನು ಬಸವಣ್ಣನು ನೀಡುತ್ತಾನೆ.

ಒಟ್ಟಾರೆ ಈ ವಚನವು ಆಚರಣೆಗಳ ಅತಿರೇಕವನ್ನು ವಿರೋಧಿಸುವುದಲ್ಲ; ಆದರೆ ಅವುಗಳಿಗೆ ಅಂತರಂಗದ ಶುದ್ಧಿ, ಅರಿವು ಮತ್ತು ಸತ್ಯಭಾವ ಸೇರದಿದ್ದರೆ ಅವು ವ್ಯರ್ಥವಾಗುತ್ತವೆ ಎಂಬುದನ್ನು ವಿಮರ್ಶಾತ್ಮಕವಾಗಿ ಹೇಳುತ್ತದೆ. ಬಸವಣ್ಣನ ದೃಷ್ಟಿಯಲ್ಲಿ ನಿಜವಾದ ಭಕ್ತಿ ಎಂದರೆ ಒಳಗಣ ಪರಿವರ್ತನೆ–ಮನಸ್ಸಿನ ಶುದ್ಧೀಕರಣ, ದುರಾಸೆಗಳ ನಿವೃತ್ತಿ ಮತ್ತು ಏಕನಿಷ್ಠ ಭಾವ. ಹೊರಗಿನ ವೈಭವ, ಸಾಮಗ್ರಿಗಳ ಹೆಚ್ಚಳ, ವಿಧಿಗಳ ಆರ್ಭಟ ಇವುಗಳಿಗಿಂತ ಒಳಗಿನ ಸತ್ಯವೇ ಮುಖ್ಯ. ಹೀಗಾಗಿ ಈ ವಚನವು ನಮಗೆ ಒಂದು ಮುಖ್ಯ ಸಂದೇಶ ನೀಡುತ್ತದೆ: ಭಕ್ತಿ ಎಂದರೆ ಪ್ರದರ್ಶನವಲ್ಲ, ಅದು ಅನುಭವ; ಪೂಜೆ ಎಂದರೆ ಕ್ರಿಯೆಯಲ್ಲ, ಅದು ಒಳಗಿನ ಶುದ್ಧಿಯ ಪ್ರತಿಬಿಂಬ.

**ಕಾಗೆಯಮರಿ ಕೋಗಿಲೆಯಾಗಬಲ್ಲುದೆ?**
**ಆಡಿನಮರಿ ಆನೆಯಾಗಬಲ್ಲುದೆ?**
**ಸೀಳನಾಯಿ ಸಿಂಹದ ಮರಿಯಾಗಬಲ್ಲುದೆ?**
**ಅರಿವು ಆಚಾರ ಸಮ್ಯಗ್ಜ್ಞಾನವನರಿಯದೆ**
**ನಾಮವ ಹೊತ್ತುಕೊಂಡು ತಿರುಗುವ**
**ಗಾವಿಲರ ಮುಖವ ನೋಡಲಾಗದು ಅಮುಗೇಶ್ವರಾ.**

ಡಾಂಭಿಕ ಯಾವತ್ತೂ ನೈಜ ಭಕ್ತನಲ್ಲ; ಅಂಥವನ ಭಕ್ತಿ ನೈಜ ಭಕ್ತಿಯಲ್ಲ ಎಂಬುದನ್ನು ಕಾಗೆ–ಕೋಗಿಲೆ, ಆಡಿನ ಮರಿ – ಆನೆ, ಸೀಳು ನಾಯಿ – ಸಿಂಹ ಈ ದೃಷ್ಟಾಂತಗಳ ಮೂಲಕ ಅತ್ಯಂತ ಪರಿಣಾಮಕಾರಿಯಾಗಿ ಪ್ರತಿಪಾದಿಸುತ್ತಾಳೆ ಅಮುಗೆ ರಾಯಮ್ಮ. ಕಾಗೆಯ ಮರಿ ಕೋಗಿಲೆಯಾಗದು; ಆಡಿನ ಮರಿ ಆನೆಯಾಗದು; ಸೀಳುನಾಯಿ ಸಿಂಹವಾಗದು. ಹಾಗೆಯೇ, ಡಾಂಭಿಕ ಭಕ್ತ ನಿಜವಾದ ಭಕ್ತನಾಗಲಾರ; ಡಾಂಭಿಕ ಭಕ್ತಿ ನಿಜವಾದ ಭಕ್ತಿಯಾಗಲಾರದು ಎಂದು ಬಹು ಮಾರ್ಮಿಕವಾಗಿ ವಿಡಂಬಿಸುತ್ತಾಳೆ ಅಮುಗೆ ರಾಯಮ್ಮ. ಆಕೆಯ ಪ್ರಕಾರ ಅರಿವು, ಆಚಾರ, ಸಮ್ಯಕ್ ಜ್ಞಾನಗಳನ್ನು ಅರಿತವನೇ ನಿಜವಾದ ಭಕ್ತ, ಅಂಥವನ ಭಕ್ತಿಯೇ ನಿಜವಾದ ಭಕ್ತಿ. ಈ ಅರಿವು, ಆಚಾರ, ಸಮ್ಯಕ್ ಜ್ಞಾನಗಳನ್ನು ಅರಿಯದೆ, ಕೇವಲ ನಾಮವನ್ನು ಹೊತ್ತು ಅಥವಾ ದೇವರ ನಾಮವನ್ನು ಪಠಿಸುತ್ತ ತಿರುಗುವವರು ನೈಜ ಭಕ್ತರಲ್ಲ: ಗಾವಿಲರು! ಇಂಥ ಗಾವಿಲರ ಮುಖವನ್ನು ನೋಡಲಾಗದೆಂದು ಬಹುತೀಕ್ಷ್ಣವಾಗಿ ತಿವಿಯುತ್ತಾಳೆ ರಾಯಮ್ಮ.

**ಮೂಗಿಲ್ಲದವಂಗೆ ಕನ್ನಡಿಯ ತೋರಲೇಕೆ?**
**ಕೈಯಿಲ್ಲದವಂಗೆ ಕುದುರೆಯನೇರಲೇಕೆ?**
**ಕಾಲಿಲ್ಲದವಂಗೆ ನಿಚ್ಚಣಿಗೆಯನೇರಲೇಕೆ?**
**ಭಕ್ತಿ ಜ್ಞಾನ ವೈರಾಗ್ಯವಿಲ್ಲದವಂಗೆ**
**ಇಷ್ಟಲಿಂಗವೇಕೆ ಅಮುಗೇಶ್ವರಾ?**

ಶಂಕೆ, ಭೀತಿ, ಕಳಂಕ–ಈ ತ್ರಿವಿಧ ಸೂತಕವಿಲ್ಲದವನು ಮಾತ್ರ ನಿಜವಾದ ಭಕ್ತ. ಅಂಥವನ ಭಕ್ತಿ ಮಾತ್ರ ನೈಜ ಸ್ವರೂಪದ ಭಕ್ತಿ. ಇಂಥ ಭಕ್ತನನ್ನು ಮಾತ್ರ ಪರಮಾತ್ಮ ಅಪ್ಪಿಕೊಳ್ಳುತ್ತಾನೆ. ತ್ರಿವಿಧಗಳನ್ನು ಅರಿಯುವುದೆಂದರೆ – ಕಾದ ಹಾಲನ್ನು ನೊಣ ಮುಟ್ಟದು; ಕಿಚ್ಚಿನೊಳಗಿನ ಗುಂಡನ್ನು ಬೆಕ್ಕು ಮುಟ್ಟದು; ಮತ್ತು ಸಂಜೀವಿನಿಯನ್ನು ಕೈಯಲ್ಲಿ ಹಿಡಿದವನನ್ನು ಹಾವು ಕಚ್ಚದು ಎನ್ನುವುದು. ಈ ಮೂರು ತೆರನಾದ ಅರಿವನ್ನುಳ್ಳವನೇ ತ್ರಿವಿಧವನ್ನರಿತವನು. ಅಂಥವನಿಗೆ ಹಿಂದೆ ಶಂಕೆಯಿಲ್ಲ. ಮುಂದೆ ಭೀತಿಯಿಲ್ಲ; ಮತ್ತೆ ಯಾವ ಕಳಂಕವೂ ಇಲ್ಲ. ಇಂಥವನನ್ನು ಮಾತ್ರ ಅಮುಗೇಶ್ವರ ಲಿಂಗ ಅಪ್ಪಿಕೊಳ್ಳುತ್ತಾನೆ ಎಂದು ನೈಜ ಭಕ್ತಿ ಹಾಗೂ ಭಕ್ತನ ಪರಿಯನ್ನು ಅತ್ಯಂತ ಪರಿಣಾಮಕಾರಿಯಾಗಿ ಇಲ್ಲಿ ಪ್ರತಿಪಾದಿಸುತ್ತಾಳೆ ಅಮುಗೆ ರಾಯಮ್ಮ.

**ಬಕಪಕ್ಷಿ ಹಲವು ಕಾಲ ಹಂಸ ಪಕ್ಷಿಯ ಸಂಗದಲ್ಲಿದ್ದರೇನು,**

**ಅದು ಶುಚಿಯಾಗ ಬಲ್ಲುದೆ?**

**ಅಂತೆಯೇ, ಅಸಜ್ಜನ ಕೂಡಲ ಚೆನ್ನ ಸಂಗನ ಶರಣರ ಸನ್ನಿಧಿಯಲ್ಲಿದ್ದರೇನು, ಸದ್ಭಕ್ತನಾಗಬಲ್ಲನೆ?**

ಸದ್ಭಕ್ತ ಅಥವಾ ಶರಣನಾಗಬೇಕಾದರೆ ಮನಶುದ್ಧಿ- ಭಾವಶುದ್ಧಿಗಳು ಅತಿಮುಖ್ಯ ಎಂಬುದನ್ನು ಕೆಲ ದೃಷ್ಟಾಂತಗಳ ಮೂಲಕ ಪರಿಣಾಮಕಾರಿಯಾಗಿ ನಿರೂಪಿಸುತ್ತಾನೆ ಚೆನ್ನಬಸವಣ್ಣ. ಈ ನಿರೂಪಣೆಯ ಮೂಲಕ ಡಾಂಭಿಕ ಭಕ್ತಿಯ ವಿಡಂಬನೆ ಹಾಗೂ ನೈಜ ಭಕ್ತಿಯ ಪರಿಗಳೂ ತಮ್ಮ ಗರಿಯನ್ನು ಬಿಚ್ಚಿಕೊಳ್ಳುತ್ತ ಹೋಗುವುದು ಮನನೀಯವಾಗಿದೆ. ಬಕ ಪಕ್ಷಿ ಹಲವು ಕಾಲ ಹಂಸ ಪಕ್ಷಿಯ ಸಂಗದಲ್ಲಿದ್ದರೂ ಹಂಸ ಪಕ್ಷಿಯಾಗದು. ಪಾಷಾಣ ಅಥವಾ ಕಲ್ಲು ನಿಧಿ ನಿಧಾನಗಳಲ್ಲಿದ್ದರೂ ಹೊನ್ನಾಗಲಾರದು. ಕೊರಡು ಕಲ್ಪವೃಕ್ಷಗಳ ಸಂಗದಲ್ಲಿದ್ದರೂ ಫಲವಾಗದು. ನಾಯಿ ಕಾಶಿಕ್ಷೇತ್ರದಲ್ಲಿದ್ದ ಮಾತ್ರಕ್ಕೆ ಅದರ ಹಾಲು ಅಮೃತವಾಗದು. ಇದ್ದಿಲು ಖಂಡುಗ ಹಾಲಿನಲ್ಲಿದ್ದರೂ ಬಿಳಿದಾಗದು. ಹಾಗೆಯೇ, ಅಸಜ್ಜನ ಅಥವಾ ದುಷ್ಟನು ಚೆನ್ನ ಸಂಗನ ಶರಣರ ಸನ್ನಿಧಿಯಲ್ಲಿದ್ದ ಮಾತ್ರಕ್ಕೆ ಸದ್ಭಕ್ತನಾಗಲಾರ ಎಂದು ಬಹು ಮಾರ್ಮಿಕವಾಗಿ ಹೇಳುತ್ತಾನೆ ಚೆನ್ನಬಸವಣ್ಣ. ಇಲ್ಲಿ ಆತ ಸದ್ಭಕ್ತರನ್ನು ಹಂಸೆ, ವಿಧಿ ವಿಧಾನ, ಕಲ್ಪತರು, ಕಾಶಿಕ್ಷೇತ್ರ, ಖಂಡುಗ ಹಾಲುಗಳಿಗೆ ಹೋಲಿಸಿರುವುದೂ ಹಾಗೂ ದುಷ್ಟನನ್ನು ಅಥವಾ ನೈಜ ಭಕ್ತಿಯನ್ನರಿಯದ ಅಸಜ್ಜನ ಡಾಂಭಿಕನನ್ನು ಬಕ, ಪಾಷಾಣ, ಕೊರಡು, ಶುನಕ, ಇದ್ದಿಲುಗಳಿಗೆ ಹೋಲಿಸಿರುವುದು ಔಚಿತ್ಯಪೂರ್ಣವಾಗಿದೆ.

ನೈಜ ಭಕ್ತಿಗೆ, ಶರಣತ್ವ ಸಂಪಾದನೆಗೆ ನಿಷ್ಠೆ, ಸತ್ಯ, ಅರಿವು, ಮನ ಶುದ್ಧಿ, ಭಾವ ಶುದ್ಧಿಗಳು ಬಹುಮುಖ್ಯವೇ ಹೊರತು, ಭಕ್ತಿಯ ಹೆಸರಿನಲ್ಲಿ ನಡೆಯುವ ಕೇವಲ ಆಚರಣೆಗಳು ಮುಖ್ಯವಾಗುವುದಿಲ್ಲ ಎನ್ನುವುದು ಚೆನ್ನಬಸವಣ್ಣನ ನಿಲುವು. ಇದನ್ನಾತ ಪ್ರಸ್ತುತ ಪಡಿಸುವ ರೀತಿ ವಿನೂತನ.

**ನಿಷ್ಠೆಯುಳ್ಳಾತಂಗೆ ನಿತ್ಯನೇಮದ ಹಂಗೇಕೆ?**

**ಸತ್ಯವುಳ್ಳಾತಂಗೆ ತತ್ತ್ವವಿಚಾರದ ಹಂಗೇಕೆ?**

**ಕೂಡಲಚೆನ್ನಸಂಗಯ್ಯಾ,**

**ನಿಮ್ಮನರಿದಾತಂಗೆ ನಿಮ್ಮ ಹಂಗೇಕೆ?**

ನೈಜ ಭಕ್ತಿಗೆ, ಶರಣತ್ವ ಸಂಪಾದನೆಗೆ ನಿಷ್ಠೆ, ಸತ್ಯ, ಅರಿವು, ಮನ ಶುದ್ಧಿ, ಭಾವ ಶುದ್ಧಿಗಳು ಬಹುಮುಖ್ಯವೇ ಹೊರತು, ಭಕ್ತಿಯ ಹೆಸರಿನಲ್ಲಿ ನಡೆಯುವ ಕೇವಲ ಆಚರಣೆಗಳು ಮುಖ್ಯವಾಗುವುದಿಲ್ಲ ಎನ್ನುವುದು ಚೆನ್ನಬಸವಣ್ಣನ ನಿಲುವು. ಇದನ್ನಾತ ಪ್ರಸ್ತುತ ಪಡಿಸುವ ರೀತಿ ವಿನೂತನ. ಪರಮಾತ್ಮನನ್ನು ಅರಿಯಬೇಕಾದರೆ ಶರಣನಾಗಬೇಕು, ಅಥವಾ ಶರಣನೇ ಆಗಬೇಕು. ಅಂದರೆ ಪರಮಾತ್ಮನನ್ನು ಅರಿಯ ಬಯಸುವವನು ನಿಷ್ಠಾವಂತನಾಗಿರಬೇಕು; ಸತ್ಯವಂತನಾಗಿರಬೇಕು, ಅರಿವುಳ್ಳ ಜ್ಞಾನಿಯಾಗಿರಬೇಕು; ಮನ ಶುದ್ಧ - ಭಾವ ಶುದ್ಧಿಯುಳ್ಳವನಾಗಿರಬೇಕು. ಇದಿಲ್ಲದೆ ಯಾವ ವ್ರತ ನಿಯಮಗಳನ್ನು ಮಾಡಿದರೂ ಯಾವ ಫಲವಿಲ್ಲ. ನಿಷ್ಠೆಯುಳ್ಳಾತನಿಗೆ ನಿಷ್ಠೆ ಮುಖ್ಯವೇ ಹೊರತು ನಿತ್ಯನೇಮ ಮುಖ್ಯವಲ್ಲ. ಹೀಗಾಗಿ ಆತನಿಗೆ ಈ ನಿತ್ಯನೇಮದ ಹಂಗಿಲ್ಲ. ನಿತ್ಯನೇಮ ಡಾಂಭಿಕ ಭಕ್ತ - ಭಕ್ತಿಯೇ ಪರಿ. ಸತ್ಯವುಳ್ಳಾತನಿಗೆ ಸತ್ಯ ಮುಖ್ಯವೇ ಹೊರತು, ತತ್ವ ವಿಚಾರ ಮುಖ್ಯವಲ್ಲ. ತತ್ವವಿಚಾರ ಡಾಂಭಿಕನ ಕೆಲಸ; ಸತ್ಯವಂತನ ಕೆಲಸವೂ ಅಲ್ಲ; ನೈಜ ಭಕ್ತನ ಕೆಲಸವೂ ಅಲ್ಲ. ಅರಿವುಳ್ಳಾತನಿಗೆ ಅರಿವು ಮುಖ್ಯವೇ ಹೊರತು, ಮಂತ್ರ ಮುಖ್ಯವಲ್ಲ. ಮನಶುದ್ಧಿಯುಳ್ಳಾತನಿಗೂ ಈ ಮಂತ್ರ ಮುಖ್ಯವಲ್ಲ. ಮನಶುದ್ಧಿಯೇ ಮುಖ್ಯ. ಭಾವಶುದ್ಧಿಯುಳ್ಳಾತನಿಗೆ ಭಾವಶುದ್ಧಿ

ಮುಖ್ಯವೇ ಹೊರತು, ಹೂವನ್ನು ಶಿವನಿಗರ್ಪಿಸುವುದು ಮುಖ್ಯವಲ್ಲ; ಹೂವು ಮುಖ್ಯವಲ್ಲ. ಹೊರಗಿನ ಯಾವ ಡಾಂಭಿಕ ನಿತ್ಯನೇಮ ಆಚಾರ ವಿಚಾರಾದಿಗಳು ನೈಜ ಭಕ್ತಿಗೆ, ಶರಣತ್ವಕ್ಕೆ, ಪರಮಾತ್ಮನ ಅರಿಯುವಿಕೆಗೆ ಸಿದ್ಧಿಸುವ ಫಲಗಳಲ್ಲ: ಭಾವ ಶುದ್ಧಿ, ಮನ ಶುದ್ಧಿಗಳೇ ಇದಕ್ಕೆ ನೈಜ ಫಲ – ಎಂಬುದನ್ನು ಚೆನ್ನಬಸವಣ್ಣ ಇಲ್ಲಿ ಧ್ವನಿಪೂರ್ಣಗೊಳಿಸುವುದು ತುಂಬಾ ಔಚಿತ್ಯಪೂರ್ಣವಾಗಿದೆ.

**ಅಜ್ಞಾನವೆಂಬ ತೊಟ್ಟಿಲೊಳಗೆ**
**ಜ್ಞಾನವೆಂಬ ಶಿಶುವ ಮಲಗಿಸಿ**
**ಜೋಗುಳ ನಿಂದಲ್ಲದೆ**
**ಗುಹೇಶ್ವರನೆಂಬ ಲಿಂಗವ ಕಾಣಬಾರದು.**

ಅಲ್ಲಮ ಪ್ರಭುವಿನ ಪ್ರಸ್ತುತ ವಚನದಲ್ಲಿ ಸಂಸಾರ ನಿಸ್ಸಾರತೆ ಹಾಗೂ ನೈಜ ಭಕ್ತಿ ವ್ಯಕ್ತವಾಗಿದೆ. ಭಕ್ತ ಮೊದಲು ಸಂಸಾರದ ಭ್ರಾಂತಿಯಿಂದ ಮುಕ್ತನಾಗಬೇಕು. ಸಂಸಾರವೆನ್ನುವುದು ಒಂದು ಭ್ರಾಂತಿಯಷ್ಟೇ. ಈ ಭ್ರಾಂತಿ ಅಳಿಯದ ಹೊರತು, ಗುಹೇಶ್ವರ ಲಿಂಗವನ್ನು ಅಥವಾ ಪರಮಾತ್ಮನನ್ನು ಕಾಣಲಾಗದು ಎನ್ನುವುದು ಈ ವಚನದ ತಿರುಳು. ಸಂಸಾರದ ಭ್ರಾಂತಿಯನ್ನು ಕಳೆಯದ ಹೊರತು ಪರಮಾತ್ಮನ ಒಲುಮೆ ಅಥವಾ ನೈಜ ಭಕ್ತಿ ಸಿದ್ಧಿಸದು – ಎಂಬುದನ್ನು ಅಲ್ಲಮ ಪ್ರಭು ಇಲ್ಲಿ ಕೆಲ ಉಪಮೆಗಳ ಮೂಲಕ ಅತ್ಯಂತ ಧ್ವನಿಪೂರ್ಣವಾಗಿ ನಿರೂಪಿಸುತ್ತಾನೆ. 'ಅಜ್ಞಾನವೆಂಬ ತೊಟ್ಟಿಲು', 'ಸಕಲ ವೇದಶಾಸ್ತ್ರವೆಂಬ ನೇಣು', 'ಜೋಗುಳ', 'ಭ್ರಾಂತಿಯ ತಾಯಿ'–ಇವು ನಿಕೃಷ್ಟವಾದ ನಿಸ್ಸಾರವಾದ ಸಂಸಾರಕ್ಕೆ ಉಪಮೆಗಳು. ಅಜ್ಞಾನವೆನ್ನುವುದಾಗಲಿ, ವೇದಶಾಸ್ತ್ರಗಳನ್ನು ನಂಬುವುದಾಗಲಿ, ಜ್ಞಾನವನ್ನು ಅಜ್ಞಾನದ ತೊಟ್ಟಿಲಲ್ಲಿಟ್ಟು ಅಥವಾ ಸಂಸಾರದಲ್ಲಿಟ್ಟು ತೂಗುವುದಾಗಲೀ, ಜೋಗುಳವಾಡುವುದಾಗಲೀ ಇವೆಲ್ಲ 'ಭ್ರಾಂತಿ ತಾಯಿ' ಎಂಬ ಸಂಸಾರದ ಸ್ಥಿತಿಗಳೇ, ಸಂಸಾರದ ಈ ಸ್ಥಿತಿ ಕಳೆಯಬೇಕೆನ್ನುತ್ತಾನೆ ಅಲ್ಲಮ ಪ್ರಭು. ಅದು ಹೇಗೆಂದರೆ ಅಜ್ಞಾನವೆಂಬ ಸಂಸಾರದ ತೊಟ್ಟಿಲು ಮುರಿಯಬೇಕು; ಸಕಲ ವೇದಶಾಸ್ತ್ರವೆಂಬ ಸಂಸಾರದ ನೇಣು ಅಥವಾ ಹಗ್ಗ ಹರಿಯಬೇಕು; ಅಜ್ಞಾನವೆಂಬ ಸಂಸಾರದ ತೊಟ್ಟಿಲಲ್ಲಿ ಜ್ಞಾನವೆಂಬ ಶಿಶುವನ್ನು ಮಲಗಿಸಿ, ಭ್ರಾಂತಿಯಿಂದ ಹಾಡುವ ಜೋಗುಳ ನಿಲ್ಲಬೇಕು. ಇಷ್ಟೆಲ್ಲ ಆಗದೆ ಹೋದರೆ ಗುಹೇಶ್ವರ ಲಿಂಗವನ್ನು ಕಾಣಬಾರದು – ಎಂದು ನಿಸ್ಸಾರ ಸಂಸಾರದ ವ್ಯರ್ಥಪ್ರಯತ್ನದ ಹಿನ್ನೆಲೆಯಲ್ಲಿ ನೈಜ ಭಕ್ತಿಯ ಸ್ವರೂಪವನ್ನು ತುಂಬಾ ಪರಿಣಾಮಕಾರಿಯಾಗಿ ಇಲ್ಲಿ ಪ್ರತಿಪಾದಿಸುತ್ತಾನೆ ಅಲ್ಲಮ ಪ್ರಭು.

**ಭಕ್ತಿಯಿಲ್ಲದ ಬಡವ ನಾನಯ್ಯ**
**ಕಕ್ಕಯ್ಯನ ಮನೆಯಲು ಬೇಡಿದೆ;**
**ಚೆನ್ನಯ್ಯನ ಮನೆಯಲು ಬೇಡಿದೆ;**
**ದಾಸಯ್ಯನ ಮನೆಯಲು ಬೇಡಿದೆ.**
**ಎಲ್ಲಾ ಪುರಾತನರು ನೆರೆದು ಭಕ್ತಿಭಿಕ್ಷವನಿಕ್ಕಿದರೆ**
**ಎನ್ನ ಪಾತ್ರೆ ತುಂಬಿತ್ತು, ಕೂಡಲಸಂಗಮದೇವಾ**

ಭಕ್ತಿಯಿಲ್ಲದ ಬಡವ ಎಂದು ಹೇಳಿಕೊಳ್ಳುತ್ತಿದ್ದರೂ ಅವರ ಭಕ್ತಿ ಶ್ರೀಮಂತಿಕೆಯನ್ನು ಇಲ್ಲಿ ಕಾಣಬಹುದು. ಕಕ್ಕಯ್ಯನ, ಚೆನ್ನಯ್ಯನ, ದಾಸಯ್ಯನ ಮನೆಯ ಮುಂದೆ ನಿಂತು ಭಕ್ತಿ ಭಿಕ್ಷೆಯನ್ನು ಬೇಡಿದೆ. ಎಲ್ಲಾ ಪುರಾತನರೂ ನನ್ನ ಪಾತ್ರೆಗೆ ಭಕ್ತಿಯನ್ನು ತುಂಬಿದರು. ಅದರಿಂದ ನನ್ನ ಪಾತ್ರೆ ತುಂಬಿತು – ಎನ್ನುತ್ತಾರೆ. ಅವರ ಭಕ್ತಿಸಾಧನೆಯ ರಹಸ್ಯ ಇಲ್ಲಿದೆ. ಅಹಂಕಾರವನ್ನು ಅಳಿದು ಸಮಷ್ಟಿಗೆ ತಮ್ಮನ್ನು ಅರ್ಪಿಸಿಕೊಂಡರು. ಮೇಲುಕೀಳುಗಳನ್ನು

ಬಿಟ್ಟು ಉದಾತ್ತವಾದುದರತ್ತ ಕೈಚಾಚಿದರು. ಅವರ ಕೈ ಕಲ್ಪವೃಕ್ಷವಾಯಿತು.

**ಕಾಯಕದಲ್ಲಿ ನಿರತನಾದಡೆ,**
**ಗುರುದರ್ಶನವಾದರೂ ಮರೆಯಬೇಕು,**
**ಲಿಂಗಪೂಜೆಯಾದರೂ ಮರೆಯಬೇಕು,**
**ಜಂಗಮ ಮುಂದೆ ನಿಂದಿದ್ದರೂ ಹಂಗ ಹರಿಯಬೇಕು.**
**ಕಾಯಕವೆ ಕೈಲಾಸವಾದ ಕಾರಣ.**
**ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು**

'ಶರಣ ಸತಿ, ಲಿಂಗಪತಿ' ತತ್ವದ ಬಗೆಗಿನ ಅಥವಾ ಭಾವದ ಬಗೆಗಿನ ತನ್ನ ನಿಲುವನ್ನು ಚೌಡಯ್ಯ ಇಲ್ಲಿ ಬಹು ಸ್ಪಷ್ಟಪಡಿಸುತ್ತಾನೆ. ವೀರಶೈವ ಧರ್ಮದ ಅಥವಾ ಶರಣ ಪರಂಪರೆಯ ಒಂದು ವಿಶಿಷ್ಟ ತತ್ವವೆಂದರೆ 'ಶರಣ ಸತಿ, ಲಿಂಗ ಪತಿ' ಭಾವ. ಇದನ್ನು ಎಲ್ಲ ಶರಣರೂ ಒಪ್ಪಿ ಆಚರಿಸಿದ್ದುಂಟು. ಆದರೆ ಚೌಡಯ್ಯ ಮಾತ್ರ ಈ ಭಾವವನ್ನು ಒಪ್ಪುವುದಿಲ್ಲ; ನಿರಾಕರಿಸುತ್ತಾನೆ. ಶರಣ ಹೆಣ್ಣಾಗುವುದೆಂದರೆ ಹೇಗೆ? ಲಿಂಗ ಅಥವಾ ಪರಮಾತ್ಮ ಗಂಡಾಗುವುದೆಂದರೆ ಹೇಗೆ? ಎಂದು ಆತ ಮಾರ್ಮಿಕ ಪ್ರಶ್ನೆ ಎತ್ತಿ ಈ ಭಾವವನ್ನು ತ್ಯಜಿಸಿ ಬಿಡುತ್ತಾನೆ. ಆತನ ದೃಷ್ಟಿಯಲ್ಲಿ ಇದು ಸಮಂಜಸವಲ್ಲದ ಭಾವ. ಇದನ್ನು ದೃಷ್ಟಾಂತದ ಮೂಲಕ ಆತ ಬಹುಸ್ಪಷ್ಟ ಪಡಿಸುತ್ತಾನೆ. ನೀರು ನೀರು ಕೂಡಿ ಒಂದಾಗಿ ಬೆರೆತರೆ, ಆ ಕೂಡಿ ಒಂದಾದ ನೀರನ್ನು ಮತ್ತೆ ಬೇರ್ಪಡಿಸಲು ಸಾಧ್ಯವಿಲ್ಲ. ಅದು ಇನ್ನೊಂದು ಹೊಸ ಸ್ವರೂಪವನ್ನು ತೊಟ್ಟುಕೊಳ್ಳುತ್ತದೆಯೇ ಹೊರತು, ನೀರನ್ನು ಬೇರ್ಪಡಿಸಲಾಗದು. ಆ ಹೊಸದೊಂದು ಸ್ವರೂಪವೆಂದರೆ ನೀರಿನ ಸಮ್ಮಿಶ್ರಣದ ಸ್ವರೂಪ. ಹೀಗೆ, ಅದು ಬೇರೊಂದು ಸ್ವರೂಪವನ್ನು ತಾಳಿ ಬಿಟ್ಟಾಗ, ಆ ಸಮ್ಮಿಶ್ರಣದ ಸ್ವರೂಪದಿಂದ ಮೊದಲು ಕೂಡಿದ ನೀರನ್ನು ಬೇರ್ಪಡಿಸುವುದು ಅಸಾಧ್ಯ. ಹಾಗೆಯೇ, ಗಂಡು ಹೆಣ್ಣಿನ ಯೋಗ ಅಥವಾ ಬೆರೆಯುವಿಕೆ ಕೂಡ. ಗಂಡು ಹೆಣ್ಣು ಬೆರೆತು ಒಂದಾಗಿ ಬಿಟ್ಟರೆ, ಅವನ್ನು ಬೇರ್ಪಡಿಸಲಾಗದು. ಏಕೆಂದರೆ, ಇಲ್ಲಿ ಗಂಡು ಹೆಣ್ಣು ಎಂಬ ಭಾವ ಅಥವಾ ಆತುರವೇ ಹಿಂಗಿ ಹೋಗಿ, ಬೇರೊಂದು ಘಟ ಅಥವಾ ಸ್ವರೂಪ ನಿರ್ಮಾಣವಾಗುತ್ತದೆ. ಅದು ಗಂಡು ಹೆಣ್ಣು ಎಂಬ ಭಾವ ಅಳಿದು, ಇನ್ನೊಂದಾದ ಅಥವಾ ಸಮ್ಮಿಶ್ರವಾದ ಭಾವದ ಸ್ವರೂಪ; ಹೊಸ ಘಟ. ಈ ಘಟದಿಂದ ಮತ್ತೆ ಮೊದಲು ಬೆರೆತ ಗಂಡು ಹೆಣ್ಣನ್ನು ಪ್ರತ್ಯೇಕಗೊಳಿಸಿ ತೋರಲಾಗದು. ಆತುರವೇ ಅಥವಾ ಭಾವವೇ ಹಿಂಗಿ ಇನ್ನೊಂದಾದ ಬಳಿಕ 'ಶರಣ ಸತಿ, ಲಿಂಗ ಪತಿ' ಎಂಬ ಭಾವ ಉಳಿಯುವುದಾದರೂ ಹೇಗೆ? ಅಂತೆಯೇ, ಈ ಭಾವವೇ ಅಥವಾ ಶರಣ ಸತಿ, ಲಿಂಗ ಪತಿ ಎಂಬ ಮಾತೇ ನೈಜ ಭಕ್ತಿಯಲ್ಲಿ ಮೊದಲನೆಯ ಮೋಸ ಎಂದು ಇಡೀ ಶರಣ ಪರಂಪರೆ ಒಪ್ಪಿ ಆಚರಿಸುತ್ತಿದ್ದ ಈ ಭಾವವನ್ನು ಘಂಟಾಘೋಷವಾಗಿ ನಿರಾಕರಿಸಿ ಬಿಡುತ್ತಾನೆ ಅಂಬಿಗರ ಚೌಡಯ್ಯ. ಅಂತೆಯೇ, ಅಂಬಿಗರ ಚೌಡಯ್ಯ ಇಡೀ ಶರಣ ಪರಂಪರೆಯಲ್ಲಿ ವಿಶಿಷ್ಟ ಶರಣನಾಗಿ ತೋರುವುದು. ಅವನಂಥ ದಿಟ್ಟ ಶರಣ, ಉಗ್ರ ಸ್ವಭಾವದ ಶರಣ ಉರಿಲಿಂಗಪೆದ್ದಿಯನ್ನು ಬಿಟ್ಟರೆ ಇನ್ನೊಬ್ಬನಿಲ್ಲ! ಇಡೀ ಶರಣ ಪರಂಪರೆಯಲ್ಲೇ 'ಶರಣ ಸತಿ, ಲಿಂಗ ಪತಿ' ತತ್ವವನ್ನು ನಿರಾಕರಿಸಿದ ಏಕೈಕ ಶರಣ ಅಂಬಿಗರ ಚೌಡಯ್ಯ.

**ಅರಸನ ಭಕ್ತಿ ಅಹಂಕಾರದಲ್ಲಿ ಹೋಯಿತ್ತು**
**ಓಲೆಕಾರನ ಭಕ್ತಿ ಅಲಗಿನ ಮನೆಯಲ್ಲಿ ಹೋಯಿತು**
**ವ್ರತಸ್ಥನ ಭಕ್ತಿ ಪ್ರಪಂಚಿನಲ್ಲಿ ಹೋಯಿತ್ತು**

ಇದು ಕಾರಣ ಕೂಡಲಚೆನ್ನಸಂಗಯ್ಯಾ ಕಿರಾತರು ಹುಟ್ಟಿ ಪುರಾತರು ಅಡಗಿದರು

ಈ ವಚನವು ಸಮಾಜದ ಎಲ್ಲಾ ವರ್ಗಗಳ ಮೇಲು ಸಮಾನವಾಗಿ ಟೀಕೆ ಮಾಡುತ್ತದೆ. ಇದು ಸಮಗ್ರ ಸಮಾಜದ ನೈತಿಕ ಕುಸಿತವನ್ನು ತೋರಿಸುತ್ತದೆ. ಭಕ್ತಿಯನ್ನು ಆಚರಣೆಗಳಿಂದ ಬೇರ್ಪಡಿಸಿ, ಅಂತರಂಗದ ಶುದ್ಧತೆಯಾಗಿ ಪರಿಗಣಿಸುತ್ತದೆ. ರಾಜರು, ಪಂಡಿತರು, ವ್ಯಾಪಾರಿಗಳು, ಕಾರ್ಮಿಕರು–ಎಲ್ಲ ವರ್ಗಗಳನ್ನೂ ವಿಮರ್ಶಿಸುವ ಮೂಲಕ ಸಮಾನತೆಯ ದೃಷ್ಟಿಕೋನವನ್ನು ತೋರಿಸುತ್ತದೆ.

ಈ ವಚನವು ಕೇವಲ ಭಕ್ತಿಯ ಕುರಿತು ಹೇಳುವುದಲ್ಲ; ಅದು ಸಮಾಜದ ನೈತಿಕ ಮತ್ತು ಧಾರ್ಮಿಕ ಸ್ಥಿತಿಯ ಆಳವಾದ ವಿಮರ್ಶೆ. ಬಸವಣ್ಣ ಅವರು ಭಕ್ತಿಯ ನಿಜಸ್ವರೂಪವನ್ನು ಅಂತರಂಗದ ಶುದ್ಧತೆ, ದಯೆ ಮತ್ತು ನೈತಿಕತೆಯೊಂದಿಗೆ ಸಂಪರ್ಕಿಸುತ್ತಾರೆ. ಇಂದಿನ ಸಮಾಜದಲ್ಲಿಯೂ ಈ ವಚನವು ಅತ್ಯಂತ ಪ್ರಸ್ತುತವಾಗಿದೆ, ಏಕೆಂದರೆ ಭಕ್ತಿಯ ಹೆಸರಿನಲ್ಲಿ ನಡೆಯುವ ಬಾಹ್ಯಾಚರಣೆಗಳನ್ನು ಇದು ಪ್ರಶ್ನಿಸುತ್ತದೆ.

ಒಟ್ಟಾರೆ, ಈ ವಚನವು "ಭಕ್ತಿ ಎಂದರೆ ರೂಪವಲ್ಲ, ಅದು ಒಳಗಿನ ಸತ್ಯ" ಎಂಬ ಮಹತ್ವದ ಸಂದೇಶವನ್ನು ಸಾರುತ್ತದೆ. ಬಸವಣ್ಣ ಅವರು ಸಮಾಜದ ವಿವಿಧ ವರ್ಗದ ಜನರ ಭಕ್ತಿ ನಿಜಸ್ವರೂಪವನ್ನು ಕಳೆದುಕೊಂಡಿದೆ ಎಂದು ತೀವ್ರವಾಗಿ ಹೇಳುತ್ತಾರೆ. ರಾಜನಿಗೆ ಅಹಂಕಾರ, ಪಂಡಿತನಿಗೆ ಅಲಂಕಾರಿಕ ಜ್ಞಾನ, ವ್ಯಾಪಾರಿಗೆ ಹಣದ ಆಸೆ, ವೃತ್ತಿಜೀವಿಗಳಿಗೆ ತಮ್ಮ ಕೆಲಸದ ಬಂಧನ, ಶೀಲವಂತರಿಗೆ ಶಂಕೆ, ಮಾತುಗಾರರಿಗೆ ಭಯ, ವ್ರತಸ್ಥರಿಗೆ ಪ್ರಪಂಚದ ವ್ಯವಹಾರ – ಇವೆಲ್ಲ ಕಾರಣಗಳಿಂದ ಅವರ ಭಕ್ತಿ ಶುದ್ಧವಾಗಿಲ್ಲ. ಅಂದರೆ, ಯಾರ ಭಕ್ತಿಯೂ ನಿಜವಾದ ಅಂತರಂಗದ ಭಕ್ತಿಯಾಗಿಲ್ಲ; ಎಲ್ಲರೂ ಯಾವುದೋ ಒಂದು ದೋಷಕ್ಕೆ ಒಳಗಾಗಿ ಭಕ್ತಿಯ ಮೌಲ್ಯವನ್ನು ಕಳೆದುಕೊಂಡಿದ್ದಾರೆ.

**ಗಂಡ ಶಿವಲಿಂಗ ದೇವರ ಭಕ್ತ,**
**ಹೆಂಡತಿ ಮಾರಿಮಸಣಿಯ ಭಕ್ತ,**
**ಗಂಡ ಕೊಂಬುದು ಪಾದೋದಕ ಪ್ರಸಾದ,**
**ಹೆಂಡತಿ ಕೊಂಬುದು ಸುರೆ ಮಾಂಸ,**
**ಭಾಂಡ ಭಾಜನ ಶುದ್ಧವಿಲ್ಲದವರ ಭಕ್ತಿ**
**ಹೆಂಡದ ಮಡಕೆಯ ಹೊರಗೆ ತೊಳೆದಂತೆ ಕೂಡಲಸಂಗಮದೇವ.**

ಒಂದು ಸಂಸಾರದಲ್ಲಿ ಗಂಡ ಶಿವಭಕ್ತನಾಗಿ ಹೊಸಧರ್ಮದ ಆಚರಣೆಗಳನ್ನು ಅನುಸರಿಸಿದರೆ ಹೆಂಡತಿ ಅದೇ ಹಿಂದಿನ ಮಾರಿ ಮಸಣಿಗಳನ್ನು ಪೂಜಿಸುತ್ತ ಮಾಂಸ ಮದ್ಯಗಳನ್ನು ಮುಂದುವರಿಸುತ್ತಿದ್ದಾಳೆ. ಇದು ಸಾಮಾಜಿಕ ಧಾರ್ಮಿಕ ಮಟ್ಟದಲ್ಲಿ ವಿಷಮ ದಾಂಪತ್ಯವೇ ಸರಿ; ಇವರ ಭಕ್ತಿ ಹೆಂಡದ ಮಡಕೆಯನ್ನು ಹೊರಗೆ ತೊಳೆದಂತೆ ಎಂದು ಬಸವಣ್ಣ ನಿಟ್ಟುಸಿರುಬಿಟ್ಟಿದ್ದಾನೆ.

ಗಂಡ ಶಿವಲಿಂಗದೇವರ ಭಕ್ತನಾಗಿ, ಲಿಂಗಾರಾಧನೆ, ಪಾದೋದಕ, ಪ್ರಸಾದಗಳಲ್ಲಿ ಮನಸ್ಸು ನೆಟ್ಟವನಾಗಿ, ಹೊಸ ಧರ್ಮದ ಶುದ್ಧಾಚಾರದಲ್ಲಿ ನಡೆಯುವವನಾಗಿ ಇರುವನು; ಹೆಂಡತಿ ಮಾರಿ–ಮಸಣಿಯ ಭಕ್ತೆಯಾಗಿಯೇ ಉಳಿದು, ಹಿಂದಿನ ಆಚರಣೆಗಳನ್ನೇ ಬಿಡದೆ ಹಿಡಿದುಕೊಂಡು, ಸುರೆ–ಮಾಂಸಗಳಲ್ಲಿ ಆಸಕ್ತಿ ಬಿಡದೆ ಮುಂದುವರಿಯುವಳು; ಇಬ್ಬರ ದಾರಿಯು ಬೇರೆ, ಭಾವನೆ ಬೇರೆ, ಆಚರಣೆ ಬೇರೆ, ಒಂದೇ ಮನೆಯೊಳಗೆ ಇದ್ದರೂ ಮನಸ್ಸುಗಳು ಒಂದಾಗದ,

ಧರ್ಮದಲ್ಲಿ ವಿಷಮ, ಬದುಕಿನಲ್ಲಿ ಅಸಮ ದಾಂಪತ್ಯ; ಇಂಥವರ ಭಕ್ತಿ ಭಾಂಡ–

ಭಾಜನ ಶುದ್ಧಿಯಿಲ್ಲದಂತೆ, ಒಳಗಣ ಕಳೆ ತೊಳೆದಿಲ್ಲದೆ ಹೊರಗೆ ಹೊಳೆಯುವಂತೆ, ಹೆಂಡದ ಮಡಕೆಯನ್ನು ಹೊರಗೆ ತೊಳೆದಂತೆ ಆಗುವುದು; ಹೊರಗೆ ಶುದ್ಧಿಯ ರೂಪ ತೋರಿದರೂ ಒಳಗೆ ಅಶುದ್ಧಿಯೇ ಉಳಿದು, ಅರಿವಿಲ್ಲದ ಆಚರಣೆ, ಏಕತೆಯಿಲ್ಲದ ಭಕ್ತಿ, ಕೂಡಲ ಸಂಗಮದೇವನ ಕಣ್ಣಿಗೆ ತೃಪ್ತಿಕರವಾಗದು; ಎಂದು ಈ ವೈಷಮ್ಯ ಕಂಡು ಬಸವಣ್ಣ ನಿಟ್ಟುಸಿರುಬಿಟ್ಟು, "ಒಳಗೊಂದು, ಹೊರಗೊಂದು ಆಗದಿರಲಿ ಭಕ್ತಿ, ಮನ–ಮಾತು–ಕರ್ಮ ಒಂದಾಗಲಿ" ಎಂದು ಉಪದೇಶಿಸುವನು.

**ಅಮುಗೆ ರಾಯಮ್ಮನ ವಚನ**

**ಅನುಭಾವಿ ಅನುಭಾವಿಗಳೆಂಬ ಅಜ್ಞಾನಿಗಳ ಮುಖವ ನೋಡಲಾಗದು.**

**ಕಂಗಳ ಮುಂದಣ ಕಾಮ, ಮನದ ಮುಂದಣ ಆಸೆ,**

**ಅಂಗದಲ್ಲಿ ಅಹಂಕಾರವಾಗಿಪ್ಪವರ ಅನುಭಾವಿಗಳೆಂಬೆನೆ?**

**ನೋಡಲಾಗದು ಅಮುಗೇಶ್ವರಲಿಂಗವೆ.**

ಅಮುಗೆ ರಾಯಮ್ಮನ ಪ್ರಕಾರ ಇಷ್ಟಲಿಂಗವನ್ನರಿಯುವುದೇ ನಿಜವಾದ ಭಕ್ತಿ, ಅದೇ ನೈಜ ಭಕ್ತನ ಪರಿ. ಇಷ್ಟಲಿಂಗವನ್ನರಿಯದ ತಾನು ಅನುಭಾವಿಯೆಂದು ಡಂಭ ತೋರುವವನು ಡಾಂಭಿಕನೇ ಹೊರತು, ನಿಜವಾದ ಭಕ್ತನಲ್ಲ; ಅಂಥವನ ಭಕ್ತಿ ನಿಜವಾದ ಭಕ್ತಿಯೂ ಅಲ್ಲ. ಆಶಾರಹಿತನಾಗಿರಬೇಕು; ಅನುಭಾವಿಯಾದವನು ನಿರಹಂಕಾರಿಯಾಗಿರಬೇಕು. ಇದನ್ನು ಬಿಟ್ಟು ಆತ ಕಾಮಿ, ಆಶಾಜೀವಿ, ಅಹಂಕಾರಿಯಾಗಿದ್ದರೆ, ಆತ ನೈಜ ಭಕ್ತನಲ್ಲ: ಡಾಂಭಿಕ ಭಕ್ತ, ಆತನ ಭಕ್ತಿ ನೈಜ ಭಕ್ತಿಯಲ್ಲ: ಡಾಂಭಿಕ ಭಕ್ತಿ. ಇದನ್ನು ಅಮುಗೆ ರಾಯಮ್ಮ ಅತ್ಯಂತ ಧ್ವನಿಪೂರ್ಣವಾಗಿ ಪ್ರತಿಪಾದಿಸುತ್ತಾಳೆ. ಇಷ್ಟಲಿಂಗವನ್ನರಿಯದೆ ತಾವು ಅನುಭಾವಿ, ಅನುಭಾವಿ ಎಂದು ಬೀಗುವವರು ಅಜ್ಞಾನಿಗಳು. ಅಂಥ ಅಜ್ಞಾನಿಗಳ ಮುಖವನ್ನು ನೋಡಲಾಗದು. ಕಣ್ಣ ಮುಂದೆ ಕಾಮ, ಮನದ ಮುಂದೆ ಆಸೆ, ಲಿಂಗದಲ್ಲಿ ಅಹಂಕಾರ – ಇದ್ದವರನ್ನು ಅನುಭಾವಿಗಳೆನ್ನಲಾಗದು. ಹತ್ತೈದು ಜನ

ಕೂಡಿಕೊಂಡು ಇಕ್ಕಿ ಎರೆಯುವವರು ಡಾಂಭಿಕ ಭಕ್ತರೇ ಹೊರತು, ನೈಜ ಭಕ್ತರೇನಲ್ಲ. ಅಂಥ ಡಾಂಭಿಕ ಭಂಡರ ಮನೆಗೆ ಹೋಗಿ, ಇಕ್ಕಿ ಎರೆಸಿಕೊಂಡು, ಭಕ್ತಿ ಬಿನ್ನಹವನ್ನು ಸ್ವೀಕರಿಸಿದರೆ, ಅದು ಬೆಕ್ಕು ಹಾಲನ್ನು ಕುಡಿದಂತೆ! ಕಣ್ಣು ಮುಚ್ಚಿ ಹಾದರ ಮಾಡಿ ನಾನು ಮಾಡಿಲ್ಲವೆಂದ ಮಾತ್ರಕ್ಕೆ ಮಾಡಿದ ಹಾದರವೇನು ಸುಳ್ಳಾಗುವುದಿಲ್ಲ. ಡಾಂಭಿಕ ಭಕ್ತರ ಪರಿ ಇದೇ. ತಾವೇ ಅತ್ಯಂತ ಶ್ರೇಷ್ಠರೆಂದು ಡಾಂಭಿಕ ಭಕ್ತಿ ಘಟವನ್ನು ರಕ್ಷಿಸುವ ಮಿಟ್ಟೆಯ ಭಂಡರಿವರು. ಇವರ ಭಕ್ತಿಯೇನಿದ್ದರೂ ಕೇವಲ ಹೊಟ್ಟೆ ಹೊರೆಯುವುದಕ್ಕಾಗಿ ಮಾತ್ರ! ಹೊಟ್ಟೆಪಾಡಿಗಾಗಿ ಬಹು ವೇಷವನ್ನು ತೊಡುವ ಈ ಭಂಡರು ಕಟ್ಟಿಗೆ ಮಣ್ಣು ಹಾಕಿ ಹೊಟ್ಟೆ ಹೊರೆಯುವನಂತೆಯೇ ಹೊರತು, ಭಕ್ತರೇನಲ್ಲ; ಇಂಥವರ ಭಕ್ತಿ ನೈಜ ಭಕ್ತಿಯೂ ಅಲ್ಲ, ಅದು ಕೇವಲ ಹೊಟ್ಟೆ ಪೂಜೆಯಷ್ಟೇ! ಇಷ್ಟಲಿಂಗವನ್ನರಿಯದೆ ತಾವು ಸತ್ಯವಂತರೆಂದು ಡಾಂಭಿಕ ಭಕ್ತಿಯ ಘಟವನ್ನು ಹೊರೆಯುವ ಇಂಥ ಘಾಟಕರ್ಮಿಗಳ ಮುಖವನ್ನು ಸಹಿತ ನೋಡಲಾಗದು – ಎಂದು ಬಹು ತೀಕ್ಷ್ಣವಾಗಿ ವಿಡಂಬಿಸುತ್ತಾಳೆ ಅಮುಗೆ ರಾಯಮ್ಮ.

**'ಅರ್ಚನೆ ಪೂಜನೆ ನೇಮವಲ್ಲ**

**ಮಂತ್ರ ತಂತ್ರ ನೇಮವಲ್ಲ**

**ಧೂಪ ದೀಪಾರತಿ ನೇಮವಲ್ಲ'**

ಸತ್ಯಕ್ಕ. ತನ್ನ ಅಭಿಪ್ರಾಯವನ್ನು ದೃಢವಾಗಿ ವ್ಯಕ್ತಪಡಿಸಿದ್ದಾಳೆ. ಶಿವಭಕ್ತನಾಗಬೇಕೆಂದರೆ ಪರಧನ, ಪರಸ್ತ್ರೀ ಹಾಗೂ ಪರದೈವಗಳ ಕಡೆಗೆ ಆಸಕ್ತಿ ತೋರಬಾರದು ಎಂಬುದು ಆಕೆಯ

ನಿಲುವಾಗಿದೆ. ಯಾರು ಶಿವಭಕ್ತರಾಗಬೇಕೆಂದುಕೊಳ್ಳುತ್ತಾರೋ, ಅವರು ತಮ್ಮ ನಡೆನುಡಿಗಳಲ್ಲಿ ಈ ಶುದ್ಧತೆಯನ್ನು ಪಾಲಿಸಬೇಕು ಎಂದು ಆಕೆ ಸ್ಪಷ್ಟವಾಗಿ ಹೇಳಿದ್ದಾಳೆ. ಈ ವಿಚಾರವನ್ನು ಅನೇಕ ವಚನಕಾರರೂ ಒತ್ತಿ ಹೇಳಿರುವುದನ್ನು ಗಮನಿಸಬಹುದು. ಪರಸ್ತ್ರೀ ಮತ್ತು ಪರಧನವನ್ನು ಶೂಲಕ್ಕೆ ಹೋಲಿಸಿರುವುದರಿಂದ, ಅವುಗಳಿಂದ ದೂರವಿರುವುದೇ ಭಕ್ತನ ನಿಜವಾದ ಗುಣವೆಂದು ತಿಳಿಯುತ್ತದೆ.

**ಉಪಸಂಹಾರ**

ಒಟ್ಟಾರೆ, ವಚನಗಳಲ್ಲಿ ಭಕ್ತಿಯ ಸ್ವರೂಪವು ಅತ್ಯಂತ ಆಳವಾದ ಮತ್ತು ಜೀವಂತವಾದ ತತ್ವವಾಗಿ ವ್ಯಕ್ತವಾಗಿದೆ. ಶರಣರು ಭಕ್ತಿಯನ್ನು ಕೇವಲ ಬಾಹ್ಯ ಆಚರಣೆಗಳಲ್ಲ, ಒಳಮನಸ್ಸಿನ ಶುದ್ಧತೆ, ನಿಷ್ಠೆ, ಸತ್ಯ ಮತ್ತು ಅರಿವಿನೊಂದಿಗೆ ಸಂಬಂಧಿಸಿದ ಒಂದು ಆಧ್ಯಾತ್ಮಿಕ ಅನುಭವವೆಂದು ಪ್ರತಿಪಾದಿಸಿದ್ದಾರೆ. ಬಸವಣ್ಣ, ಅಕ್ಕ ಮಹಾದೇವಿ, ಅಲ್ಲಮ ಪ್ರಭು, ಚೆನ್ನಬಸವಣ್ಣ, ಅಂಬಿಗರ ಚೌಡಯ್ಯ ಹಾಗೂ ಅಮುಗೆ ರಾಯಮ್ಮ ಮುಂತಾದ ಶರಣರು ತಮ್ಮ ವಚನಗಳ ಮೂಲಕ ಡಾಂಭಿಕ ಭಕ್ತಿಯನ್ನು ತೀವ್ರವಾಗಿ ಖಂಡಿಸಿ, ನೈಜ ಭಕ್ತಿಯ ಮಹತ್ವವನ್ನು ಸಾರಿದ್ದಾರೆ.

ಈ ವಚನಗಳಲ್ಲಿ ವ್ಯಕ್ತವಾಗುವ ಸಂದೇಶ ಸ್ಪಷ್ಟವಾಗಿದೆ – ಭಕ್ತಿ ಎಂದರೆ ಪ್ರದರ್ಶನವಲ್ಲ, ಅದು ಆತ್ಮಾನುಭವ; ಪೂಜೆ ಎಂದರೆ ವಿಧಿವಿಧಾನವಲ್ಲ, ಅದು ಮನ–ಭಾವಗಳ ಶುದ್ಧೀಕರಣ. ಜಾತಿ, ಲಿಂಗ, ಸ್ಥಾನಮಾನಗಳೆಂಬ ಭೇದಗಳನ್ನು ಮೀರಿ, ಸಮಾನತೆ ಮತ್ತು ಮಾನವೀಯತೆಯ ಮೌಲ್ಯಗಳನ್ನು ಸ್ಥಾಪಿಸುವುದೇ ನೈಜ ಭಕ್ತಿಯ ಗುರಿ ಎಂದು ಶರಣರು ಸಾರುತ್ತಾರೆ.

ಇಂದಿನ ಸಮಾಜದಲ್ಲಿಯೂ ಈ ವಚನಗಳ ಪ್ರಸ್ತುತತೆ ಅಪಾರವಾಗಿದೆ. ಬಾಹ್ಯಾಚರಣೆಗಳ ಆರ್ಭಟ ಹೆಚ್ಚುತ್ತಿರುವ ಈ ಕಾಲಘಟ್ಟದಲ್ಲಿ, ವಚನಗಳು ನಮಗೆ ಒಳಗಿನ ಸತ್ಯವನ್ನು ಅರಿಯುವ ದಾರಿಯನ್ನು ತೋರಿಸುತ್ತವೆ. ಹೀಗಾಗಿ, ವಚನಗಳಲ್ಲಿ ಪ್ರತಿಪಾದಿತವಾದ ಭಕ್ತಿಯ ಸ್ವರೂಪವು ಮಾನವನ ಆತ್ಮೋನ್ನತಿಗೆ ದಾರಿದೀಪವಾಗಿದ್ದು, ಸಾರ್ಥಕ ಜೀವನದ ಮಾರ್ಗದರ್ಶಕವಾಗಿಯೂ ಉಳಿದಿದೆ.

**ಪರಾಮರ್ಶನ ಗ್ರಂಥಗಳು:**

1. ಚಿದಾನಂದ ಮೂರ್ತಿ ಎಂ., ವಚನ ಸಾಹಿತ್ಯ (ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ ಸಂ.5), ಬೆಂಗಳೂರು: ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.
2. ಮುಗಳಿ ರಂ. ಶ್ರೀ., ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು.
3. ಪ್ರಸನ್ನ ಪಿ. ಬಿ., ಸತ್ಯಕ್ಕನ ವಚನಗಳಲ್ಲಿ ಭಕ್ತಿ, ಇಂಟರ್ನ್ಯಾಷನಲ್ ಜರ್ನಲ್ ಆಫ್ ಕನ್ನಡ ರಿಸರ್ಚ್ (ನಿಯತಕಾಲಿಕೆ).
4. ಬಸವರಾಜು ಎಲ್., ಬಸವಣ್ಣನವರ ವಚನಗಳು, ಮೈಸೂರು: ಗೀತಾ ಬುಕ್ ಹೌಸ್.